STARRED QUESTIONS

(to which oral answers were given)

Palmgur Societies in Hassan District.

*Q.—598. Sri G. A. THIMMAPPA GOWDA (Arkalgud).—

Will the Government be pleased to state :—

(*a*) the number of Palmgur Societies in Hassan District ;

(*b*) the period for which these societies are granted permits to manufacture Palmgur and whether these societies are permitted to sell Neera ;

(*c*) whether any society in Hassan District has manufactured Palmgur and if so, in what quantity and to what society or place they have supplied Palmgur ;

(*d*) whether any arrangements have been made by Government to supervise the actual production and distribution of Palmgur ;

(*e*) whether any complaints have been received regarding the misuse of these permits by these societies in Hassan District ; and if so, the action taken by the Government to prevent these malpractices ?

A.— Sri RAMAKRISHNA HEGDE (Minister for Co-operation and Development).—

(*a*) Seven.

(*b*) For one year from 1st July 1962.
The societies are not permitted to sell Neera.

(*c*) Yes.

	Mds.	*Srs.*
(1) Hassan ...	1,022	18
(2) Alur ...	834	00
(3) Belur ...	295	05
(4) Ho enarasipur ...	506	25
(5) Arsikere ...	1,134	35
(6) Sakleshpur (for four months) ...	321	00
(7) Arkalgud (Branch) ...	539	09

The Palmgur manufactured by the societies is being sold to the general public in open shandies and at the place of manufacture.

(*d*) No.

(*e*) Yes.

Government have directed the enforcing officers to be more vigilant, and have ordered that no fresh licences for the manufacture of Palmgur should be granted.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ತಾವು (ಇ) ಗೆ ಉತ್ತರವಾಗಿ ಪರ್ಮಿಟುಗಳನ್ನು ದುರುಪಯೋಗಿಸಿಕೊಂಡಿರುವ ವಿಚಾರದಲ್ಲಿ ದೂರುಗಳು ಬಂದಿವೆಯೆಂದು ಹೇಳಿದ್ದೀರಿ. ಈ ದೂರು

ಗಳ ಮೇಲೆ ತಾವು ಏನಾದರೂ ವಿಚಾರಣೆ ನಡೆಸಿದ್ದೀರೋ! ಹಾಗೇನಾದರೂ ಇದ್ದರೆ ಆ ರಿಪೋರ್ಟಿನ ಕಂಟೆಂಟ್ಸ್ ತಿಳಿಸಬೇಕು.

ಶ್ರೀ ರಾಮಕೃಷ್ಣ ಹೆಗ್ಗಡೆ.—ದೂರುಗಳು ಬಂದಮೇಲೆ ಅಧಿಕಾರಿಗಳಿಗೆ ಇದಕ್ಕೂ ಹೆಚ್ಚು ವಿಜಿಲೆಂಟಾಗಿ ಕೆಲಸ ಮಾಡಬೇಕು ಅಂತ ಹೇಳಿದ್ದೇವೆ, ಮತ್ತು ಎರಡು-ಮೂರು ಕೇಸುಗಳು ಈಗಾಗಲೇ ಬುಕ್ ಆಗಿವೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಪಾವಗಡ ಸೊಸೈಟಿಗಳಲ್ಲಿ ಬೆಲ್ಲ ತಯಾರಾಗುತ್ತಿಲ್ಲ, ರುಜುವಾತು ಕೊಡುತ್ತೇವೆ ಎಂದು ದೂರು ಬಂದಿದೆ. ಆ ದೂರುಗಳ ಮೇಲೆ ಏನು ರಿಪೋರ್ಟು ಕೊಟ್ಟಿದ್ದಾರೆ ಸರಕಾರಕ್ಕೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಈ ಸೊಸೈಟಿಗಳಲ್ಲಿ ಎಷ್ಟು ಬೆಲ್ಲ ತಯಾರಾಗುತ್ತಿದೆ ಅನ್ನುವುದನ್ನು ಕೊಟ್ಟಿದ್ದೇವೆ. ಒಂದೆರಡು ಕೇಸುಗಳಲ್ಲಿ ಯಾರು ದೂರು ಕೊಟ್ಟಿದ್ದರೋ ಅವರನ್ನು ಕಾಂಟ್ರಾಕ್ಟ್ ಮಾಡಿದಾಗ ಅವರು ರುಜುವಾತು ಮಾಡಲಿಕ್ಕೆ ಮುಂದೆ ಬರಲಿಲ್ಲ.

ಶ್ರೀ ಜಿ. ಎ. ತಿಮ್ಮಪ್ಪ ಗೌಡ.—ದೂರುಗಳು ಕೊಟ್ಟಂಥವರು ಎಂ. ಎಲ್. ಎ. ಮತ್ತು ಎಂ. ಎಲ್. ಸಿ. ಗಳು ಎಂಬತಕ್ಕಂಥಾದ್ದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಇದು ಗಮನಕ್ಕೆ ಬಂದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—(ಸಿ) ಗೆ ಉತ್ತರವಾಗಿ ಎಷ್ಟೆಷ್ಟು ಮಣ ಬೆಲ್ಲ ತಯಾರಾಗಿದೆ ಅನ್ನುವುದನ್ನು ಹೇಳಿದ್ದೀರಿ. ಈ ಅಂಕಿಅಂಶಗಳನ್ನು ಕೊಟ್ಟಂಥ ಅಧಿಕಾರಿಗಳ ಮೇಲೆ ಏನು ಉಗ್ರ ಕ್ರಮ ತೆಗೆದುಕೊಳ್ಳುತ್ತೀರಾ! ಏಕೆಂದರೆ ನುಳ್ಳು ರಿಪೋರ್ಟು ಕೊಟ್ಟು ಸರಕಾರವನ್ನು ಮಿಸ್‌ಲೀಡ್ ಮಾಡುತ್ತಿದ್ದಾರೆ.

Mr. SPEAKER.—After it is approved, action will be taken.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಅರಸೀಕೆರೆ ಸೊಸೈಟಿಯಲ್ಲಿ ತಾಳೆ ಬೆಲ್ಲ ತಯಾರಾಗದಿದ್ದರೂ ನೀರಾ ಇಳಿಸಿಬಿಟ್ಟು ಅದನ್ನು ಹೆಂಡವಾಗಿ ಮಾರಾಟ ಮಾಡುತ್ತಿದ್ದಾರೆನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ? ಇದರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

Mr. SPEAKER.—How did he bring it to the notice of the Government ? Did he bring it to the notice of the Government ?

Sri H. R. KESHAVA MURTHY.—We went to the Hon'ble Home Minister and informed him orally, Sir.

Mr. SPEAKER.—Then it is a relevant question. It may be answered.

Sri RAMAKRISHNA HEGDE.—If the Hon'ble Members have given anything in writing to the Home Minister, I am sure the Home Minister has taken necessary action. But here we are concerned with regard to the production of palmgur. I have given the figures. Whenever complaints have been given to the Government, they have been looked into and necessary action has been taken.

ಶ್ರೀ ಎನ್. ನಂಜೇಗೌಡ.—1963ನೇ ಜುಲೈನಿಂದ ನೀರಾ ಮಾರಾಟ ಮಾಡುವುದಕ್ಕೆ ಅವಕಾಶ ಕೊಟ್ಟಿಲ್ಲ ಎಂದು ಹೇಳಿದ್ದೀರಿ. ಕೃಷ್ಣರಾಜಪೇಟೆಯ ಬಾರ್ಡರಿನಲ್ಲಿ ಹೊಳೆನರಸೀಪುರ ಇರುವುದರಿಂದ ಅಲ್ಲಿ ಈಚಲು ಗಿಡಗಳನ್ನು ಕಟ್ಟಿ ನೀರಾ ಇಳಿಸಿ ಅದನ್ನು ಹೆಂಡವಾಗಿ ಪರಿವರ್ತಿಸಿ ಕುಡಿದುದಕ್ಕೆ ಕೇಸ್ ಆಗಿ ಅವರಿಗೆ ಶಿಕ್ಷೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಆ ಸಮಾಚಾರ ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಸೊಸೈಟಿಗಳಲ್ಲಿ ತಯಾರಾಗತಕ್ಕ ತಾಟಬೆಲ್ಲವನ್ನು ಸಂತೆಗಳಲ್ಲಿ ಮಾರಾಟ ಮಾಡಲಾಗುತ್ತದೆ ಎಂದು ಹೇಳಿದ್ದಾರೆ. ಯಾವ ಸಂತೆಯಲ್ಲಿ, ಯಾವ ಅಧಿಕಾರಿಗಳು, ಯಾವ ಸಾರ್ವಜನಿಕರಿಗೆ ಮಾರಾಟ ಮಾಡಿದ್ದಾರೆ ಎಂದು ತಿಳಿಸುತ್ತಾರೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಯಾವ ಸಂತೆಯಲ್ಲಿ ಮಾರಾಟವಾಗಿದೆ ಎಂದು ನಿರ್ದಿಷ್ಟವಾಗಿ ಹೇಳುವುದು ಕಷ್ಟ. ಬೆಲ್ಲ ತಯಾರಾದ ಮೇಲೆ ಅದನು ಅಲ್ಲಿಯೇ ಮಾರಾಟ ಮಾಡಬಹುದು, ಪೇಟೆಯಲ್ಲಿ ಮಾರಾಟಮಾಡಬಹುದು, ಸಂತೆಯಲ್ಲಿ ಗಿರಾಕಿಗಳಿದ್ದರೆ ಅಲ್ಲಿಯೂ ಮಾರಾಟ ಮಾಡಬಹುದು ಅದಕ್ಕೆ ಯಾವ ನಿರ್ಬಂಧವೂ ಇಲ್ಲ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—1-7-62ರ ರಾಗಾ ಒಂದುವರ್ಷದವರೆಗೆ ಲೈಸನ್ಸ್ ಕೊಡ ಲಾಗಿತ್ತು ಎಂದು ಹೇಳಿದ್ದೀರಿ. ತಾಟಿಬೆಲ್ಲವನ್ನು ತಯಾರು ಮಾಡಲು 1963ನೇ ಜುಲೈನಿಂದ ಲೈಸನ್ಸ್ ಕೊಡವುದಿಲ್ಲವೆಂದು ಹೇಳಿದ್ದೀರಿ. ಈಗಲೂ ನೀರಾ ಇಳಿಸುವುದು, ತಾಟಿಬೆಲ್ಲ ತಯಾರು ಮಾಡುವುದು ಈ ಕೆಲಸಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

Sri RAMAKRISHNA HEGDE.—I am sorry Sir, I have to amend the the answer because this question was asked as long back as March 1963 and the answer was based on the information received at that time. Now I have to furnish additional information.

After 1-7-63, licence has been renewed up to the end of March 1964 to the following five societies.—

1. Channakesavaswamy Neera Society, Belur.
2. One Society at Arkalgud
3. One Society at Arsikere
4. One Society at Hassan
5. One Society at Alur.

ಶ್ರೀ ಇ. ನಾರಾಯಣ ಗೌಡ.—ಜುಲೈ ಒಂದನೆಯ ತಾರೀಖಿನಿಂದ ನೀರಾ ಮಾರಾಟ ಮಾಡಲು ಅನುಮತಿ ಕೊಡುವುದಿಲ್ಲ ಎಂದು ಹೇಳಿದ್ದೀರಿ. ನಮ್ಮ ಪಕ್ಕದ ರಾಜ್ಯವಾದ ಆಂಧ್ರದಲ್ಲಿ ನೀರಾ ಬಹಳ ಜನಪ್ರಿಯವಾದ ಪಾನೀಯವಾಗಿದೆ. ಅದರಿಂದ ಬಹಳ ಹೆಚ್ಚು ಹಣ ಸಹ ದೊರಕು ತ್ತಿದೆ. ಅದೇ ರೀತಿ ನಮ್ಮ ರಾಜ್ಯದಲ್ಲಿ ಕೂಡ ನೀರಾ ಮಾರಾಟ ಮಾಡುವುದಕ್ಕೆ ಅವಕಾಶ ಮಾಡಿ ಕೊಡುತ್ತೀರಾ ?

Mr. SPEAKER.—This question has been put so many times. Any way, it may be answered.

Sri RAMAKRISHNA HEGDE.—I do not know in what State people are fond of what things. We are not concerned with that.

ಶ್ರೀ ಪಿ. ಎ. ತಿಮ್ಮಪ್ಪಗೌಡ.—23-12-63ರಲ್ಲಿ ಈ ಪ್ರಶ್ನೆಗೆ ಉತ್ತರ ಕೊಡುತ್ತ

"Government ordered that no fresh licences for the manufacture of palmgur should be granted."

ಎಂದು ಹೇಳಿದ್ದೀರಿ. ಈಚೆಗೆ ಐದು ಸೊಸೈಟಿಗಳಿಗೆ ಲೈಸನ್ಸ್ ಕೊಟ್ಟಿದೇವೆಂದು ಹೇಳಿದ್ದೀರಿ. ಹಿಂದೆ ಸರ್ಕಾರ ಆರ್ಡರು ಮಾಡಿದ್ದರೂ ಕೂಡ ಪುನಃ ಈ ಐದು ಸೊಸೈಟಿಗಳಿಗೆ ಪರ್ಮಿಟ್ ಕೊಡುವುದಕ್ಕೆ ಕಾರಣವೇನು ಸ್ವಾಮಿ ?

Sri RAMAKRISHNA HEGDE.—I have already said, there was a small mistake. I have already admitted and I have amended the answer.

Sri C. J. MUCKANNAPPA.—With the reference to (*e*) Sir, in view of the unemployment prevailing among the tappers, will the Government consider the question of granting licences liberally for the manufacture of palmgur?

Sri RAMAKRISHNA HEGDE.—It is a question of policy Sir. I am afraid we cannot discuss questions of policy during the question hour.

Mr. SPEAKER.—Sri G. V. Gowda should not carry on conversation with his neighbour. He may put the question.

Sri G. V. GOWDA.—I was asking for some information on this questions, Sir. In view of the very many complaints received by the Government, may I know why the Government did not make arrangement for the supervision of the actual production and supply?

Sri RAMAKRISHNA HEGDE.—Sir, may I inform the Hon'ble Member that the procedure is, this society was started under the

auspices of the Khadi Board. It is the district Khadi Organisers who are appointed by the Khadi Board that should look after and supervise the affairs of these societies. It is only when instances of misuse are brought to the notice of the Government, that Government can take action, and it has been done.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಖಾದಿ ಬೋರ್ಡಿನ ಸೂಪರ್‌ವಿಷನ್ನಿಗೆ ಒಳಪಟ್ಟು ಕೆಲವರು ಕಂಟ್ರಾಕ್ಟರುಗಳು ಉದ್ದೇಶಪೂರ್ವಕವಾಗಿ ಹೆಂಡ ಇಳಿಸುವುದಕ್ಕೋಸ್ಕರ ಈ ಸೊಸೈಟಿಗಳನ್ನು ಮಾಡಿಕೊಂಡು ಒಂದು ಜೂರು ಬೆಲ್ಲವನ್ನೂ ತಯಾರ್ಮಾದದೆ ಎಲ್ಲವನ್ನೂ ಹೆಂಡವಾಗಿ ವ್ಯಾಪಾರ ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ರಾಮಕೃಷ್ಣ ಹೆಗ್ಗಡೆ. ಅಂಥದ್ದು ನನ್ನ ಗಮನಕ್ಕೆ ಬಂದಿಲ್ಲ. ಅಂಥದ್ದೇನಾದರೂ ನಮ್ಮ ಗಮನಕ್ಕೆ ತಂದರೆ ನಾವು ತಕ್ಷಣ ಏನು ಪ್ರತೀಕಾರ ಮಾಡಬೇಕೋ ಅದನ್ನು ಮಾಡುತ್ತೇವೆ.

ಎಚ್. ಡಿ. ದೇವೇಗೌಡ.—ಆಳುವ ಪಕ್ಷದ ಎಂ. ಎಲ್. ಎ. ಮತ್ತು ಎಂ. ಎಲ್. ಸಿ. ಅದವರು ತಮ್ಮ ಗಮನಕ್ಕೆ ತಂದಿದ್ದಾರೆ. ಇನ್ನು ಯಾರ ಮುಖೇನ ತಮ್ಮ ಗಮನಕ್ಕೆ ತರಬೇಕು ಸ್ವಾಮಿ.

Sri RAMAKRISHNA HEGDE.—ಆಳುವ ಪಕ್ಷ ಅಥವಾ ವಿರೋಧ ಪಕ್ಷ ಎನ್ನುವ ವ್ಯತ್ಯಾಸವಿಲ್ಲ. Even ordinary citizens can bring to the notice of the Government if there is any case of misuse or malpractice.

ಶ್ರೀ ಟಿ. ಡಿ. ದೇವೇಂದ್ರಪ್ಪ.—ತಾಳೆ ಬೆಲ್ಲವನ್ನು ರಾಜ್ಯದಲ್ಲೆಲ್ಲ ತಯಾರಿಸಿದರೆ ಬೆಲ್ಲದ ಧಾರಣೆ ಕಡಿಮೆ ಮಾಡಬಹುದು ಎನ್ನುವುದನ್ನು ಸರ್ಕಾರ ಮನಗಂಡು ಅದರ ತಯಾರಿಕೆಯನ್ನು ವಿಸ್ತರಿಸುವುದಕ್ಕೆ ಯೋಚನೆ ಮಾಡುತ್ತದೆಯೇ ಸ್ವಾಮಿ ?

Sri RAMAKRISHNA HEGDE.—It is a suggestion for action and it will be considered.

Sri G. V. GOWDA.—The answer is supplied saying that so many maunds and seers have been produced in Hassan; even figures given. I wish to know whether Government have verified the yield in accordance with any recovery formula?

Sri RAMAKRISHNA HEGDE.—That is very difficult Sir, to verify, as suggested by the Hon'ble Member, because even though a certain number of trees have been allotted to particular societies, there have been cases where other people tap these trees and they take away the neera and other products.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಎಷ್ಟೋ ಕಡೆ ನೀರಾ ಇಲ್ಲ, ಬೆಲ್ಲ ಇಲ್ಲ, ಸೇಂದಿ ಮಾರುತ್ತಿದ್ದಾರೆ ಎಂದು ಬಹಳ ಜನ ತಮಗೆ ಹೇಳಿದರೂ ಕಡೆ ನೀರಾ ಹೆಸರಿನಲ್ಲಿ ಹೆಂಡ ಮಾರುತ್ತಿದ್ದಾರೆಂದು ಹೇಳಿದರೂ ಕೂಡ ಗಮನಕ್ಕೆ ತೆಗೆದುಕೊಂಡಂತೆ ಕಾಣುವುದಿಲ್ಲ ಇದನ್ನು ಖುದ್ದಾಗಿನೋಡಲು ನಮ್ಮ ಜೊತೆ ಬರುವುದಕ್ಕೆ ಸಿದ್ಧವಾಗಿದ್ದೀರಾ ಸ್ವಾಮಿ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಬರೋಣ ಅದಕ್ಕೆ ಏನೂ ಆಕ್ಷೇಪಣೆ ಇಲ್ಲ. ಎಲ್ಲೆಲ್ಲ ಯಾವಯಾವ ಸೊನ್ನಟಿ ವಿಚಾರದಲ್ಲಿ ದೂರುಗಳು ಬಂದಿದ್ದುವೋ ಅಲ್ಲ ಕ್ರಮ ತೆಗೆದುಕೊಂಡು 2-3 ಕಡೆ ಕೇಸುಗಳನ್ನು ಬುಕ್ ಮಾಡಿದ್ದೇವೆ.

Mr. SPEAKER.—On proper occasions, he has agreed to come with the Hon'ble Minister.

Sri C. J. MUCKANNAPPA.—In view of the liberal licences issued for neera manufacture in the neighbouring State, do Government seriously apply their mind to this question at least in order to solve the unemployment problem among the toddy tappers, at least in cases where it is not misused ?

Sri RAMAKRISHNA HEGDE.—I have already replied that the suggestion will be considered.